ಶ್ರೀ ಅಶೋಕ್ ಗುರಪ್ಪ ಶಾಬಾದಿ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ಆದರೆ ನನ್ನ ಸಿಂಧಗಿ ಮತಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸಂತೆ ಮಾರುಕಟ್ಟೆಗಳ ನಿರ್ಮಾಣ ನಡೆಯುವುದರ ಬಗ್ಗೆ ನಾನು ಕೇಳಿದ್ದೆ ಆದರೆ ಇಂಡಿ ತಾಲ್ಲೂಕಿನಲ್ಲಿ ಹಾಗೂ ಬೇರೆ ಮತಕ್ಷೇತ್ರಗಳಲ್ಲಿ ನಡೆಯುವ ಕಾಮಗಾರಿಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ ಆದರೆ ನನ್ನ ಮತಕ್ಷೇತ್ರದಲ್ಲಿ ಯಾವುದೇ ಸಂತೆ ಮಾರುಕಟ್ಟೆ ಕೆಲಸ ಇದುವರೆಗೆ ಪ್ರಾರಂಭವಾಗಿಲ್ಲ ಮತ್ತು 2006–07ನೇ ಸಾಲಿನಲ್ಲಿ ಹುಣಶೇಹಾಳ ಮತ್ತು ಚಾಂದ್‌ಕವಟೆ ಗ್ರಾಮಗಳಲ್ಲಿ ಸಂತೆ ಮಾರುಕಟ್ಟೆಗಳನ್ನು ಸ್ಥಾಪನೆ ಮಾಡುವ ಸಲುವಾಗಿ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು ಆದರೆ ಹುಣಶೇಹಾಳ ಗ್ರಾಮಕ್ಕೆ ಮಾತ್ರ ಮಂಜೂರು ಮಾಡಿದ್ದಾರೆ ಚಾಂದ್‌ಕವಟೆಯಲ್ಲಿ ಅತ್ಯಂತ ಅವಶ್ಯಕವಾಗಿ ಬೇಕಾಗಿದೆ ಅಲ್ಲಿ ಅತಿ ದೊಡ್ಡ ಸಂತೆ ನಡೆಯತಕ್ಕಂತಹ ಪ್ರದೇಶ ಹಾಗೂ ಅದು ದೊಡ್ಡ ಗ್ರಾಮ ಪಂಚಾಯ್ತಿ ಕೇಂದ್ರವಿದೆ ಅಲ್ಲಿಗೆ ಮಂಜೂರು ಮಾಡಿಲ್ಲ ಅದಕ್ಕೆ ಕಾರಣವೇನು ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು

ಶ್ರೀ ಶರಣಬಸಪ್ಪ ದರ್ಶನಾಪುರ್ (ಕೃಷಿ ಮಾರುಕಟ್ಟೆ ಸಚಿವರು) ಈಗಾಗಲೇ ಒಂದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದೇವೆ ಅಲ್ಲಿ ಇನ್ನು 15 ದಿವಸದಲ್ಲಿ ಕೆಲಸ ಶುರು ಮಾಡುತ್ತೇವೆ ಇನ್ನು ಚಾಂದ್‌ಕೋಟ್ ಬಗ್ಗೆ ಹೇಳಿದ್ದಾರೆ ಅದನ್ನು ಬರುವ ಮುಂದಿನ ದಿನಗಳಲ್ಲಿ ತೆಗೆದುಕೊಳ್ಳುತ್ತೇವೆ

ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ಖಾಲಿ ನಿವೇಶನ ನೀಡುವ ಬಗ್ಗೆ

135 (481)– ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸುಗೂರು)– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಖಾಲಿ ಇರುವ ನಿವೇಶನವನ್ನು "ಜಿಲ್ಲಾ ಕೃಷಿ ಸಮಾಜ" ಇದರ ಕಟ್ಟಡಕ್ಕೆ ಬಿಟ್ಟುಕೊಡುವ ಪ್ರಸ್ತಾವನೆಯು ಸರ್ಕಾರದಲ್ಲಿದೆಯೇ,

ಆ) ಹಾಗಿದ್ದಲ್ಲಿ, ಅದು ಯಾವ ಹಂತದಲ್ಲಿದೆ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು)–

ಅ) ಇಲ್ಲ

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ್ ಉತ್ತರವನ್ನು ಒದಗಿಸಿದ್ದಾರೆ ಆದರೆ ಈ ಸಮಸ್ಯೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಕೃಷಿ ಕಾಲೇಜಿನ ಆವರಣ ಬಹಳ ದೊಡ್ಡದಾಗಿದೆ ಮತ್ತು ಮುಖ್ಯ ರಸ್ತೆಗೆ ಹೊಂದಿಕೊಂಡಿರುವುದರಿಂದ ಕೃಷಿ ಸಮಾಜದವರು ಅಲ್ಲಿ ಜಾಗ ಕೊಟ್ಟರೆ ಅಲ್ಲಿ ಬಿಲ್ಡಿಂಗ್ ಕಟ್ಟಿಸುವುದಕ್ಕೆ ಅನುಕೂಲವಾಗುತ್ತದೆ ಅವರ ಹತ್ತಿರ ದುಡ್ಡು ಸಹ ಇದೆ ಮಾನ್ಯ ಸಚಿವರು ಆ ಜಾಗವನ್ನಾದರೂ ಅಥವಾ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಹಿಂದೆ ಇರತಕ್ಕಂತಹ ಒಂದು ಕಟ್ಟಡ ಕೂಡ ಸುಮಾರು 15 ವರ್ಷಗಳಿಂದ ಕೀಲಿ ಹಾಕಿದೆ ಅದನ್ನಾದರೂ ಕೊಡಬೇಕು ಅಲ್ಲಿ ಹಂದಿಗಳು ಹಾಗೂ ಇತರ ಜನರು ಓಡಾಡುತ್ತಾರೆ ಕಡೆಯ ಪಕ್ಷ ಆ ಕಟ್ಟಡವನ್ನಾದರೂ ಕೊಟ್ಟರೆ ಒಳ್ಳೆಯದು, ಅದು ಅವರ ವ್ಯಾಪ್ತಿಯಲ್ಲಿ ಬರುತ್ತದೆ ಆ ಕಟ್ಟಡವನ್ನು ಕೊಡಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ

ಶ್ರೀ ಬಂಡೆಪ್ಪ ಕಾಶಂಪುರ್ (ಕೃಷಿ ಸಚಿವರು) ಮಾನ್ಯ ಸದಸ್ಯರು ಹೇಳಿದ ಹಾಗೆ ಕೃಷಿ ಸಮಾಜ ಕಟ್ಟಡ ಎ ಪಿ ಎಂ ಸಿ ಯಾರ್ಡ್ ಒಳಗಡೆ ಇದೆ ಕೃಷಿ ಸಮಾಜಕ್ಕೆ ನಾವು ಅರ್ಜಿ ಸಲ್ಲಿಸಿ, ಅಲ್ಲಿಯೇ ನಿವೇಶನ ತೆಗೆದುಕೊಂಡು ಅಲ್ಲಿ ಕಟ್ಟಡ ಕಟ್ಟುತ್ತಿದ್ದೇವೆ ಏಕೆಂದರೆ ಕೃಷಿ ಸಮಾಜ ಒಂದು ರೀತಿ ಪ್ಯಾರಲಲ್ ಆಗಿ ರೈತರಿಗೆ ಸಂಬಂಧಪಟ್ಟಿದ್ದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ ಇಲ್ಲಿಯೇ ನಮ್ಮ ಎ ಪಿ ಎಂ ಸಿ ಮಂತ್ರಿಗಳು ಇದ್ದಾರೆ ಅವರ ಜೊತೆ ಮಾತನಾಡಬಹುದು ಮತ್ತು ಕಟ್ಟಡ ಕಟ್ಟಬೇಕಾದರೆ ಒಂದು ಲಕ್ಷ ರೂಪಾಯಿ ಕೊಡುತ್ತೇವೆ 5 ಲಕ್ಷ ರೂಪಾಯಿ ಜಿಲ್ಲಾ ಕೇಂದ್ರದಲ್ಲಿ ಕೊಡುತ್ತೇವೆ ತಾಲ್ಲೂಕು ಕೇಂದ್ರಕ್ಕೆ ಬೇರೆ ರೇಟು ಇದೆ ಹಾಗಾಗಿ ನಾನು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುವುದೇನೆಂದರೆ ಎ ಪಿ ಎಂ ಸಿ ಯಲ್ಲಿ ಅವರು ಅರ್ಜಿ ಕೊಟ್ಟರೆ ಅವರು ಮಂಜೂರು ಮಾಡುತ್ತಾರೆ ಮುಂದಿನ ಕಟ್ಟಡ ಕಟ್ಟುವುದಕ್ಕೆ ನಾವು ಸಹಾಯ ಮಾಡುತ್ತೇವೆ

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ್ ಕಟ್ಟಡ ಕಟ್ಟಲು ಅನುಕೂಲ ಮಾಡಿಕೊಟ್ಟರೆ ಒಳ್ಳೆಯದು, ಅಷ್ಟು ಸಾಕು ನಮಗೆ

ಅಧ್ಯಕ್ಷರು ಮಾನ್ಯ ಮಂತ್ರಿಗಳು ಕುಳಿತುಕೊಂಡೆ ಉತ್ತರ ಹೇಳಿದರೆ ಹೇಗೆ? ಸದಸ್ಯರು ನಿಂತುಕೊಂಡು ಪ್ರಶ್ನೆ ಕೇಳುತ್ತಿದ್ದಾರೆ

ಅಧ್ಯಕ್ಷರು ಈಗ ಮಾನ್ಯ ಮಂತ್ರಿಗಳು ಹೊರಟುಹೋದರು ಈಗ ಏನಾಗಿದೆ, ಬಿಪಿಎಲ್ ಕಾರ್ಡ್ ಬಗ್ಗೆ ದೊಡ್ಡ ರಾದ್ಧಾಂತವಾಗಿದೆ ಅದನ್ನು ಸಮಗ್ರವಾಗಿ ಇನ್ನೊಂದು ಸಾರಿ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳೋಣ ಆಗ ಇದನ್ನು ಕೇಳಿ ಸಂಬಂಧಪಟ್ಟ ಸಚಿವರು ಕಂದಾಯ ಸಚಿವರಿಗೆ authorize ಮಾಡಿದ್ದರು ಅವರು ಈಗ ಹೊರಟುಹೋಗಿದ್ದಾರೆ ಏನಾಗಿದೆ ಎಂದರೆ ನೀವು ಆಗ ಇರಲಿಲ್ಲ ದಯಮಾಡಿ ಕೇಳಿ ಅವರ ಹೆಸರನ್ನು ಕೂಗಿದಾಗ ಅವರು ಇರಲಿಲ್ಲ ಆದ್ದರಿಂದ benefit of doubt ಎಂದು ಅವರು ಹೋಗಿದ್ದಾರೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೇ, ನಾನು ಇಲ್ಲೇ ಇದ್ದೆ

ಅಧ್ಯಕ್ಷರು ಅಯಿತು ಅವರು ಹೋಗಿದ್ದಾರೆ ಅವರು ಉತ್ತರವನ್ನು ಕೊಡಬೇಕು ಆದರೆ ಕಂದಾಯ ಸಚಿವರಿಗೆ authorize ಮಾಡಿ ಹೋಗಿದ್ದಾರೆ ಆದ್ದರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆ ಇದೆಯಲ್ಲ, ಆಗ ಮಾತನಾಡುವಿರಂತೆ

ಶ್ರೀ ಬಿ ಆರ್ ಪಾಟೀಲ್ ಅವರನ್ನು ಕರೆಸಿ ಸಾರ್ ಇದು ಬಹಳ important.

ಅಧ್ಯಕ್ಷರು ಕರೆಸಿದರೂ ಅದರ ಬಗ್ಗೆ ಏನೂ ಆಗುವುದಿಲ್ಲ ಅದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿ ಸಂಬಂಧಪಟ್ಟ ಸಚಿವರು ಅವರಿಗೆ authorise ಮಾಡಿ ಹೋಗಿದ್ದಾರೆ ಇನ್ನೊಂದು ದಿವಸ ತೆಗೆದುಕೊಳ್ಳೋಣವೆಂದು ತೀರ್ಮಾನವಾಗಿದೆ

ಶ್ರೀ ಬಿ ಆರ್ ಪಾಟೀಲ್ ನಮ್ಮ ಕಂದಾಯ ಸಚಿವರು ಬಂದರು

ಅಧ್ಯಕ್ಷರು ಇದು ಈಗಾಗಲೇ ತೀರ್ಮಾನವಾಗಿದೆ ನೀವು ಆಗ ಇರಲಿಲ್ಲ ಮಾನ್ಯ ಕಂದಾಯ ಸಚಿವರೇ, ಬಿ ಆರ್ ಪಾಟೀಲರ ಒಂದು ಪ್ರಶ್ನೆ ಬಂದಿದೆ APL ಮತ್ತು BPL ಕಾರ್ಡ್ ವಿತರಣೆ, ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) ಅದು ಜನರಲ್ question ಇದೆ ಈಗಾಗಲೇ ಸದಸ್ಯರುಗಳು ಸಲಹೆಯನ್ನು ಕೊಟ್ಟರು

ಅಧ್ಯಕ್ಷರು ಅದನ್ನು ಹೇಳಿ ಅವರಿಗೆ

ಶ್ರೀ ಜಗದೀಶ್ ಶೆಟ್ಟರ್ ಅರ್ಧ ಗಂಟೆ ಚರ್ಚೆಗೆ ಈಗಾಗಲೇ ಅಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದಾರೆ ಅದಕ್ಕಾಗಿ ಅದನ್ನು ಚರ್ಚೆ ಮಾಡೋಣವೆಂದು ಹೇಳಿದರು ಸಭಾಧ್ಯಕ್ಷರು ಅದರ ಬಗ್ಗೆ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದಾರೆ

ಅಧ್ಯಕ್ಷರು ಇಲ್ಲಿ ಏನಾಗಿದೆ, ಬರದ ಬಗ್ಗೆ ಮಾತನಾಡುವಾಗ ಬಹಳ extensive ಆಗಿ ಸಿದ್ದರಾಮಯ್ಯನವರು ಅದರ ಬಗ್ಗೆ ಮಾತನಾಡಿದ್ದಾರೆ ಕಂದಾಯ ಸಚಿವರು ಅದಕ್ಕೆ ಉತ್ತರವನ್ನು ಕೊಡುತ್ತಾರೆ ಅವರೇನು ಹೇಳುತ್ತಾರೆ ಏನು ಎಂದು ನೋಡೋಣ ಸಂಬಂಧಪಟ್ಟ ಸಚಿವರು ಬೇರೆ ಇಲ್ಲವಲ್ಲ

ಶ್ರೀ ಜಗದೀಶ್ ಶೆಟ್ಟರ್ ನಾನು ಕೊಡುತ್ತೇನೆಂದು ಹೇಳಿದ್ದೇನೆ

ಶ್ರೀ ಎಸ್ ರಾಜೇಂದ್ರನ್ ಅರ್ಧ ಗಂಟೆ ಚರ್ಚೆಗೆ ಬಂದರೆ ಅವರೂ participate ಮಾಡುತ್ತಾರೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ಒಂದು ವಿನಂತಿ ನಮ್ಮ ಅನುಭವದ ಹಿನ್ನೆಲೆಯಲ್ಲಿ ಅರ್ಧ ಗಂಟೆ ಚರ್ಚೆಗೆ ತಾವು ಈ ಹಿಂದೆಯೂ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಬರಲಿಲ್ಲ ಹಿಂದಿನ ಅಧಿವೇಶನದಲ್ಲೂ ಹಾಗೇ ಉಳಿದುಬಿಟ್ಟಿವೆ ಏಕೆಂದರೆ ಇದು ಎಲ್ಲ ಸದಸ್ಯರುಗಳಿಗೂ ಸಂಬಂಧವಟ್ಟಿರುವುದು ತಾವೇ ಇವತ್ತು ಇಂಥ ದಿವಸ ಎಂದು ನಿಗದಿ ಮಾಡಿದರೆ ಅನುಕೂಲವಾಗುತ್ತದೆ, ತಾವೇ ಒಂದು ನಿರ್ಧಾರವನ್ನು ಮಾಡಿ ಏನಾಗಿದೆ ಎಂದರೆ ಯಾವತ್ತೂ ಅರ್ಧ ಗಂಟೆ ಚರ್ಚೆಗೆ ಬರಲೇ ಇಲ್ಲ ತಾವು ಅವಕಾಶ ಕೊಡುತ್ತೀರಿ ಅದು ಆಗುವುದಿಲ್ಲ ಅನೇಕ ವಿಷಯಗಳ ಒತ್ತಡದಿಂದ ಚರ್ಚೆಗಳಾಗುತ್ತಿಲ್ಲ ತಾವೇ ಒಂದು ನಿರ್ದಿಷ್ಟವಾಗಿ ಸಮಯವನ್ನು ಹೇಳಿಬಿಡಿ

ಅಧ್ಯಕ್ಷರು 15ನೇ ತಾರೀಖಿಗೆ ಕೊಡುತ್ತೇನೆ 15ನೇ ತಾರೀಖು ಪ್ರಶ್ನೋತ್ತರ ಆದ ತಕ್ಷಣ ಇದಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆ

ಶ್ರೀ ಬಿ ಆರ್ ಪಾಟೀಲ್ ಅಯಿತು Thank you Sir

ಶ್ರೀ ಕುಮಾರ್ ಬಂಗಾರಪ್ಪ ಒಂದೇ ಒಂದು clarification ಇದೆ

ಅಧ್ಯಕ್ಷರು ಏನು clarification ಕೇಳುತ್ತೀರಿ?

ಶ್ರೀ ಕುಮಾರ್ ಬಂಗಾರಪ್ಪ ಇದರ ಬಗ್ಗೆ ಅಲ್ಲ ಈ ಪ್ರಶ್ನೋತ್ತರದ ಮೇಲೆ ಒಂದು clarification ಇದೆ ಇಲ್ಲಿ ಮಾನ್ಯ ಸಚಿವರು 1135 ನೇ ಪ್ರಶ್ನೆ, ಈರುಳ್ಳಿ ಬಗ್ಗೆ ಚರ್ಚೆ ಮಾಡುವಾಗ ಹೇಳಿದರು 'ಈರುಳ್ಳಿ ಖರೀದಿಯಲ್ಲಿ

ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎನ್ನುವುದಕ್ಕೆ "ಲಿಖಿತ ಮೂಲಕ ಬಂದಿರುವುದಿಲ್ಲ, ಮಾಧ್ಯಮಗಳ ಮೂಲಕ ಬಂದಿದೆ" ಎಂದು ಉತ್ತರವನ್ನು ಕೊಟ್ಟಿದ್ದಾರೆ ಮಾಧ್ಯಮಗಳ ಮೂಲಕವೆಂದರೆ ಲಿಖಿತ ಮೂಲಕ ಅಲ್ಲವೇ?

ಶ್ರೀ ಎಸ್ ಎಸ್ ಪಾಟೀಲ್ ಈ ನಮೂನೆ ಉತ್ತರವನ್ನು ಕೊಡುತ್ತಾರಲ್ಲ, ಇದು ಸರಿಯೇ? ಅಧಿಕಾರಿಗಳು ಏನು ಮಾಡುತ್ತಾರೆ?

(ಗೊಂದಲ)

ಅಧ್ಯಕ್ಷರು ಈಗ ಡಿ ಆರ್ ಪಾಟೀಲರು ಅವರು ಇಲ್ಲ

ಶ್ರೀ ಕುಮಾರ್ ಬಂಗಾರಪ್ಪ ಇದನ್ನು ಇಲ್ಲಿಗೆ ಬಿಟ್ಟು ಬಿಡುವುದಾ?

ಅಧ್ಯಕ್ಷರು ಏನಪ್ಪ, ಮಾಡುತ್ತೀಯಾ? ಅದಕ್ಕೆ

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಸಚಿವರು) ಮಾನ್ಯ ಅಧ್ಯಕ್ಷರೇ, ದಿನಾಂಕ 09 02 2007 ರಂದು 9ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 64 ಪ್ರಶ್ನೆಗಳ ಪೈಕಿ 51 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು. ಮಂಡಿಸಲಾಯಿತು

ಶ್ರೀ ಜೆ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆ ಬಗ್ಗೆ ನೋಟೀಸ್ ಕೊಟ್ಟಿದ್ದೆ

ಅಧ್ಯಕ್ಷರು ಇವತ್ತು ಶೂನ್ಯವೇಳೆ ಇಲ್ಲ ಗಮನ ಸೆಳೆಯುವ ಸೂಚನೆಯೂ ಇಲ್ಲ ಇವತ್ತು ಏನಾಗಿದೆ ಎಂದರೆ ನಿಯಮ 69 ರ ಮೇಲೆ ಈ ಬರಪರಿಸ್ಥಿತಿ ಬಗ್ಗೆ ಏನು ಚರ್ಚೆ ಇದೆ, ಆ ಚರ್ಚೆ ಮತ್ತು ಉತ್ತರ ಇವತ್ತು ಮುಗಿಯಬೇಕು ಆ ಕಾರಣದಿಂದ ಇವತ್ತು ತೆಗೆದುಕೊಳ್ಳುತ್ತಿಲ್ಲ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಶೂನ್ಯವೇಳೆ ಒಂದೇ ಒಂದು ನಿಮಿಷ

ಅಧ್ಯಕ್ಷರು ನಾನು ನಿಮಗೆ ಸೋಮವಾರ ಅವಕಾಶವನ್ನು ಕೊಡುತ್ತೇನೆ ಸೋಮವಾರ ಎಲ್ಲರೂ ಕೇಳಿದ್ದಾರೆ ಆವತ್ತು ಕೊಡುತ್ತೇನೆ ಈಗ ಜಯಪ್ರಕಾಶ್ ಹೆಗ್ಡೆಯವರೇ ಮಾತನಾಡಿ

ಶ್ರೀ ಜೆ ಸಿ ಮಾಧುಸ್ವಾಮಿ ಇವತ್ತು ಎಷ್ಟು ಹೊತ್ತಿನವರೆಗೂ ನಡೆಸುತ್ತೀರಿ?